ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2020-21ನೇ ಸಾಲಿಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಬೆಂಗಳೂರಿನ ಕಛೇರಿಯ ಅಧಿಕಾರಿಗಳ ವೇತನ ಮತ್ತು ಇತರೆ ಭತ್ಯೆಗಳನ್ನು ಭರಿಸಲು ಏಪ್ರಿಲ್ ಮತ್ತು ಮೇ ಮಾಹೆಗಳ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:01-04-2020.
2. ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ ಇವರ ಪತ್ರ ಸಂಖ್ಯೆ:ಆರ್‌ಡಿಪಿಆರ್‌ಯು/01/ಹಣಕಾ/2020/10, ದಿನಾಂಕ:07-04-2020.
3. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:28-04-2020.

ಪ್ರಸ್ತಾವನೆ:

2020-21ನೇ ಸಾಲಿನ ಆಯವ್ಯಯದಲ್ಲಿ ಗದಗನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯದ ಲೆಕ್ಕ ಶೀರ್ಷಿಕೆ:2515-00-102-0-13(101-ಸಹಾಯಾನುದಾನ-ವೇತನಗಳು)ಯಡಿ ರೂ.169.40ಲಕ್ಷಗಳು, ಲೆಕ್ಕ ಶೀರ್ಷಿಕೆ:2515-00-102-0-13(103-ಸಹಾಯಾನುದಾನ-ಸಾಮಾನ್ಯ)ಯಡಿ ರೂ.1100.00ಲಕ್ಷಗಳು, ಲೆಕ್ಕ ಶೀರ್ಷಿಕೆ:2515-00-102-0-13(115-ಸಹಾಯಾನುದಾನ-ಗುತ್ತಿಗೆ/ಹೊರಗುತ್ತಿಗೆ)ಯಡಿ ರೂ.80.00ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ:4515-00-101-0-01-132(ಬಂಡವಾಳ ವೆಚ್ಚಗಳು)ಯಡಿ ರೂ.2000.00ಲಕ್ಷಗಳು ಸೇರಿ ಒಟ್ಟಾರೆ, ರೂ.3349.40ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೋರಿರುವಂತೆ, ಮೇಲೆ ಓದಲಾದ(1) ಮತ್ತು (3)ರ ಆದೇಶಗಳಲ್ಲಿ ತಿಳಿಸಿರುವಂತೆ 2020-21ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ:2515-00-102-0-08 (101-ಸಹಾಯಾನುದಾನ-ವೇತನಗಳು)ಯಡಿ ರೂ.28.23ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ: 2515-00-102-0-08 (115-ಸಹಾಯಾನುದಾನ-ಗುತ್ತಿಗೆ/ಹೊರಗುತ್ತಿಗೆ) ಯಡಿ ರೂ.13.33ಲಕ್ಷಗಳ ಅನುದಾನವನ್ನು ಏಪ್ರಿಲ್-2020 ಮತ್ತು ಮೇ-2020ರ ಮಾಹೆಗಳಿಗೆ ಅನ್ವಯಿಸುವಂತೆ 2020-21ನೇ ಸಾಲಿಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಬೆಂಗಳೂರಿನ ಕಛೇರಿಯ ಅಧಿಕಾರಿಗಳ ವೇತನ ಮತ್ತು ಇತರೆ ಭತ್ಯೆಗಳ ವೆಚ್ಚಗಳಿಗಾಗಿ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಅದರ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಏಪ್ರಿಲ್-2020 ಮತ್ತು ಮೇ-2020ರ ಮಾಹೆಗಳಿಗೆ ಬಿಡುಗಡೆಗೊಳಿಸಬೇಕಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1. | 2515–00–102–0–08–101 (101– ಸಹಾಯಾನುದಾನ-ವೇತನಗಳು) | 169.40 | 28.23 |
| 2. | 2515–00–102–0–08–103 (103– ಸಹಾಯಾನುದಾನ-ಸಾಮಾನ್ಯ) | 1100.00 | – |
| 3. | 2515–00–102–0–08–115 (115– ಸಹಾಯಾನುದಾನ-ಗುತ್ತಿಗೆ/ ಹೊರಗುತ್ತಿಗೆ) | 80.00 | 13.33 |
| 4. | 4515–00–101–0–01–132 (ಬಂಡವಾಳ ವೆಚ್ಚಗಳು) | 2000.00 | – |

ಗದಗನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯದ ಹಾಗೂ ಬೆಂಗಳೂರಿನ ಕಛೇರಿಯ ಅಧಿಕಾರಿಗಳ ವೇತನ ಮತ್ತು ಇತರೆ ಭತ್ಯೆಗಳಿಗಾಗಿ ಏಪ್ರಿಲ್-2020 ಮತ್ತು ಮೇ-2020ರ ಮಾಹೆಗೆ ಅನ್ವಯಿಸುವಂತೆ ಅನುದಾನವನ್ನು ಬಿಡುಗಡೆಗೊಳಿಸಲು ಉದ್ದೇಶಿಸಲಾಗಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 201 ಜಿಪಸ 2020, ದಿನಾಂಕ:22-05-2020**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ:2515-00-102-0-08(101-ಸಹಾಯಾನುದಾನ-ವೇತನಗಳು)ಯಡಿ ರೂ.28.23ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ: 2515-00-102-0-08(115-ಸಹಾಯಾನುದಾನ-ಗುತ್ತಿಗೆ/ಹೊರಗುತ್ತಿಗೆ) ಯಡಿ ರೂ.13.33ಲಕ್ಷಗಳ ಅನುದಾನವನ್ನು ಏಪ್ರಿಲ್-2020 ಮತ್ತು ಮೇ-2020ರ ಮಾಹೆಗಳಿಗೆ ಅನ್ವಯಿಸುವಂತೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಬೆಂಗಳೂರಿನ ಕಛೇರಿಯ ಅಧಿಕಾರಿಗಳ ವೇತನ ಮತ್ತು ಇತರೆ ಭತ್ಯೆಗಳ ವೆಚ್ಚಗಳಿಗಾಗಿ ಒಟ್ಟಾರೆ ರೂ.41.56ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿದೆ.

ಸದರಿ ಅನುದಾನವನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ ಇದರ ಉಳಿತಾಯ ಖಾತೆ ಸಂಖ್ಯೆ:36538494457(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗವರ್ನಮೆಂಟ್ ಎಸ್ಟೇಟ್ ಶಾಖೆ, ಗದಗ, IFSC Code:SBIN0011270, Branch code-11270, Recipient code-1200736300)ಗೆ ಖಜಾನೆ-2 ಮೂಲಕ ಜಮೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯವರಿಗೆ ಅನುದಾನದ ಬಿಲ್ಲಿನ ಮೇಲೆ ರುಜು ಮಾಡಿ ಸೆಳೆಯಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:01-04-2020ರನ್ವಯ ಆಯಾಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

22/05/2020
(ಸಿ.ಮಂಜುಳಾ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

22.05.2020

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಗದಗ.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು.
7. ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಗದಗ.
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.

9. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು/ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು.

10. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

3. ನಿರ್ದೇಶಕರು(ಪಂ.ರಾಜ್-2), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.